ಒ ಎಸ್ ನಂಃ **1644/2023**

ಪಿಡಬ್ಲೂ **: 1**

ದಿನಾಂಕ **22-08-2025**ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ವಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಾದ ಶ್ರೀ **SIG** ರವರಿಂದಃ

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ/ಹಿಂದಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಎನ್ ಬಿ ಪಿ ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿ/ಹಿಂದಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿ/ಹಿಂದಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

ನಾನು ಡಿಪ್ಲೋಮೊ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಉದ್ಯಮಭಾಗದ ಖಾಯಂ ನಿವಾಸಿ. ಕೇಸು ಹಾಕಲು ನಾನು ಮಾಹಿತಿ ಕೊಟ್ಟಿದ್ದೇನೆ. ಈ ಪ್ರಕರಣದಲ್ಲಿ ಹಾಜರುಮಾಡಿರುವ ದಾಖಲೆಗಳನ್ನು ನಾನು ತೆಗಿಸಿಕೊಂಡು ಬಂದು ಹಾಜರುಮಾಡಿದ್ದೇನೆ. ನಾನು ಆಸ್ತಿ ಸಂಖ್ಯೆ 2272, 2272(ಎ) ಮತ್ತು 2272(ಬಿ) ಆಸ್ತಿಗಳಿಗೆ ಸಂಬಂಧಪಟ್ಟಂತೆ ಕೇಸು ಹಾಕಿದ್ದೇನೆ. ನಾನು ಸದರಿ ಆಸ್ತಿಗಳನ್ನು 1997 ರಲ್ಲಿ ಖರೀದಿ ಮಾಡಿದ್ದೇನೆ. ನಾನು ಖರೀದಿ ಮಾಡುವಾಗ ಆಸ್ತಿಯಲ್ಲಿ ಅಂಗಡಿ ಇತ್ತು ಆದರೆ ಅದರಲ್ಲಿ ಯಾರೂ ವ್ಯವಹಾರ ಮಾಡುತ್ತಿರಲಿಲ್ಲ. ನಾನು ಖರೀದಿ ಮಾಡುವಾಗ ಸದರಿ ಆಸ್ತಿಯಲ್ಲಿ 3 ಅಂಗಡಿಗಳು ಇದ್ದವು. ನನಗೆ ಪ್ರತಿಯೊಂದು ಅಂಗಡಿಗಳ ಅಳತೆ ನೆನಪಿಲ್ಲ. ಸದರಿ ಆಸ್ತಿಯ ಅಳತೆ ಉತ್ತರಕ್ಕೆ - 40 X 63 ಮತ್ತು ದಕ್ಷಿಣಕ್ಕೆ -40 X 51 ಇರುತ್ತದೆ. ನಾನು ಖರೀದಿ ಮಾಡಿದಾಗ ಸರ್ವೇ ಮಾಡಿರಲಿಲ್ಲ. ನಾನು ಸದರಿ ಆಸ್ತಿಯ ಮಾಲೀಕರು ಖರೀದಿಗೆ ಕೊಟ್ಟಂತೆ ಕ್ರಯಕ್ಕೆ ಪಡೆದಿರುತ್ತೇನೆ. ಸದರಿ ಮಾಲೀಕರು ಅಳತೆ ಮಾಡಿ ಕ್ರಯಪತ್ರ ಬರೆದುಕೊಟ್ಟಿದ್ದಾರೆ.

ಯಾವ ಸರ್ವೇ ನಂಬರನಲ್ಲಿ ನಾನು ಆಸ್ತಿ ಖರೀದಿ ಮಾಡಿದ್ದೇನೆ ಎಂದು ಹೇಳಲಾಗುವುದಿಲ್ಲ. ನಾನು ಖರೀದಿ ಮಾಡುವ ಸಮಯದಲ್ಲಿ ನನ್ನ ಅಕ್ಕ-ಪಕ್ಕದ ಜಾಗವನ್ನು ಅಂದಾಜಿನ ಪ್ರಕಾರ ಖರೀದಿದಾರರಿಗೆ

ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಆಸ್ತಿ ಖರೀದಿ ಮಾಡಿದಾಗ ಸದರಿ ಆಸ್ತಿ ಪೀರನವಾಡಿ ಪಂಚಾಯಿತಿ ವ್ಯಾಪ್ತಿ ಒಳಗೆ ಬರುತ್ತಿತ್ತು. ಸದರಿ ಪಂಚಾಯಿತಿ ಒಳಗೆ ಬರುತ್ತಿತ್ತು ಎಂದು ತೋರಿಸುವ ದಾಖಲೆ ಹಾಜರುಮಾಡಿದ್ದೇನೆ. ನನ್ನ ಮೂಲ ಮಾಲೀಕರ ಹೆಸರು ಸದರಿ ಪಂಚಾಯಿತಿ ಒಳಗೆ ಹೆಸರು ಇತ್ತು. ಯಾವ ಆದೇಶದ ಪ್ರಕಾರ ಅವರ ಹೆಸರು ನಮೂದಾಗಿತ್ತು ಎಂದರೆ ಸಾಕ್ಷಿ ನನ್ನ ಮೂಲ ಮಾಲೀಕರು ಖರೀದಿ ಮಾಡಿದ್ದರು ಅದರ ಆಧಾರದ ಮೇಲೆ ನಮೂದಾಗಿತ್ತು ಎಂದು ನುಡಿಯುತ್ತಾರೆ.

ನನ್ನ ಹೆಸರು 1997 ರಲ್ಲಿ ಸದರಿ ಪಂಚಾಯಿತಿಯಲ್ಲಿ ದಾಖಲಾಗಿರುತ್ತದೆ. ಸದರಿ ದಾಖಲೆಯನ್ನು ಹಾಜರುಮಾಡಿದ್ದೇನೆ. ಸದರಿ ಆದೇಶದಲ್ಲಿ ನಾನು ಖರೀದಿ ಮಾಡಿದ ಅಳತೆಯನ್ನು ನಮೂದಿಸಿದ್ದಾರೆ. ನಾನು ಆ ರೀತಿ ಯಾವುದೇ ದಾಖಲೆಗಳನ್ನು ಹಾಜರುಮಾಡಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ದಾಖಲೆಯಲ್ಲಿ ಆಸ್ತಿಯ ಅಳತೆ ಬರೆದಿಲ್ಲ ಎಂದರೆ ಸರಿಯಲ್ಲ. ಖಾನಾಪೂರ ಮತ್ತು ಗೋವಾ NH ರಸ್ತೆಯು ದಾವಾ ಆಸ್ತಿಯ ಪಶ್ಚಿಮಕ್ಕೆ ಇರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ - ಪ್ರತಿವಾದಿಯ ಕಟ್ಟಿದ ಮನೆ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಉತ್ತರ ಮತ್ತು ದಕ್ಷಿಣಕ್ಕೆ - 10ಅಡಿ ಅಗಲದ ರಸ್ತೆಗಳು ಓಡಾಡಲು ಇರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಉತ್ತರಕ್ಕೆ - ಕಾಂಬಳೆ ಅವರ ಕಟ್ಟಡ ಮತ್ತು ದಕ್ಷಿಣಕ್ಕೆ - ಕುರಾಡೆಯವರ ಕಟ್ಟಡ ಇರುತ್ತದೆ ಎಂದು ನುಡಿಯುತ್ತಾರೆ. ಉತ್ತರ ಮತ್ತು ದಕ್ಷಿಣಕ್ಕೆ ಯಾವುದೇ ರಸ್ತೆ ಇರುವುದಿಲ್ಲ. ನಾನು ಸದರಿ ವಿಚಾರವನ್ನು ಕೇಸು ಹಾಕುವಾಗ ವಕೀಲರಿಗೆ ಹೇಳಿದ್ದೆ. ಆ ರೀತಿ ರಸ್ತೆ ಇದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಶ್ಚಿಮದ NH ರಸ್ತೆ ಸುಮಾರು 8 ವರ್ಷಗಳ ಹಿಂದೆ ಅಗಲೀಕರಣ ಆಗಿರಬಹುದು. ಸದರಿ ಅಗಲೀಕರಣದಲ್ಲಿ ದಾವಾ ಆಸ್ತಿಯನ್ನು ಭೂಸ್ವಾಧೀನ ಮಾಡಿಕೊಡಲಾಗಿದೆ. NH ರಸ್ತೆಯವರು ಎಷ್ಟು ಭೂಸ್ವಾಧೀನ ಮಾಡಿಕೊಂಡರು ಎಂದು ನೆನಪಿಲ್ಲ, ಆದರೆ ಈಗ 735 ಚದುರ ಅಡಿ ಉಳಿದುಕೊಂಡಿದೆ ಎಂದು ನುಡಿಯುತ್ತಾರೆ. NH ರಸ್ತೆಯವರು ಎಷ್ಟು ಸ್ವಾಧೀನ ಮಾಡಿಕೊಳ್ಳುತ್ತೇವೆ ಎಂದು ನೋಟೀಸ್ ಕೊಟ್ಟಿರಲಿಲ್ಲ. ಸ್ವಾಧೀನಪಡಿಸಿಕೊಂಡ ಆಸ್ತಿಗೆ ಪರಿಹಾರ ಪಡೆದುಕೊಂಡಿಲ್ಲ. ಅಂಗಡಿಗಳು ದಾವಾ ಆಸ್ತಿಯಲ್ಲಿ ಇರುವುದಕ್ಕೆ ಪಂಚಾಯಿತಿಯ ದಾಖಲೆಗಳಲ್ಲಿ ನಮೂದು ಇತ್ತು. ಸದರಿ ಅಂಗಡಿಗಳು ವಾಣಿಜ್ಯ

ಪ್ರದೇಶದಲ್ಲಿರುವ ಅಂಗಡಿಗಳು ಎಂದರೆ ಸರಿ. NH ರವರು ಸ್ವಾಧೀನ ಮಾಡಿಕೊಂಡಾಗ ಅಂಗಡಿಗಳು ಇದ್ದವು. ನಾನು ಖರೀದಿ ಮಾಡಿದಾಗ ಅಂಗಡಿಗಳು ಬೀಳುವ ಸ್ಥಿತಿಯಲ್ಲಿದ್ದವು ಎಂದರೆ ಸರಿಯಲ್ಲ. ಸಾಕ್ಷಿ ನಾನು ಹೊಸ ಕಟ್ಟಡ ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. NH ರವರು ಸ್ವಾಧೀನ ಮಾಡಿಕೊಳ್ಳುವಾಗ ಅಂಗಡಿಗಳು ಬಿದ್ದಿದ್ದವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಕ್ಷಿಣ ಭಾಗದಲ್ಲಿ ಸ್ವಲ್ಪ ಭಾಗ ಬಿದ್ದಿತ್ತು ಎಂದು ನುಡಿಯುತ್ತಾರೆ. ಸುಮಾರು 2-3 ಅಡಿ ಅಗಲದಷ್ಟು ಕಟ್ಟಡ ಬಿದ್ದಿತ್ತು.

**ಮುಂದುವರೆದ ವಾಟೀ ಸವಾಲುಃ** ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/-

1 **ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ಬೆಳಗಾವಿ.**